**ಸಾಕ್ಷಿಯನ್ನು ದಿನಾಂಕ 03-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಹೆಚ್ ಎಂ ವಕೀಲರಿಂದಃ**

**1.** ವಾದಿಯ ತಂದೆ ಈರಯ್ಯರವರನ್ನು ನಾನು ನೋಡಿರುವುದಿಲ್ಲ. ಸದರಿ ಈರಯ್ಯರವರಿಗೆ ಕರಿಯಣ್ಣ, ವಾದಿ, ಮಲ್ಲಯ್ಯ, ಕೊಣೇರಯ್ಯ ಮಕ್ಕಳು. ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ಈ ದಾವೆಯನ್ನು ಸರ್ವೆ **59/3** ವಿಸ್ತೀರ್ **25.12** ಗುಂಟೆಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಸರ್ವೆ ನಂ **59/3** ಒಟ್ಟು **2 ½** ವಿಸ್ತೀರ್ಣ ಇರುತ್ತದೆ. ಸದರಿ ವಿಸ್ತೀರ್ಣವನ್ನು ಸಮಭಾಗವಾಗಿ ವಾದಿ ಮತ್ತು ಅವರ ಸಹೋದರರು ಸುಮಾರು **40** ವರ್ಷಗಳ ಹಿಂದೆಯೇ ಪಾರಿಕತ್ತಿನ ಮೂಲಕ ಹಂಚಿಕೊಂಡಿರುತ್ತಾರೆ. ಸದರಿ ಪಾರಿಕತ್ತನ್ನು ನಾನು ನೋಡಿರುವುದಿಲ್ಲ. ಸರ್ವೆ ನಂ **59/3** ರ ಪೂರ್ವಕ್ಕೆ ಈರಮ್ಮನ ಮಗಳಿಗೆ ಸೇರಿದ ಒಂದು ಮನೆ ಇರುತ್ತದೆ. ಸದರಿ ಸರ್ವೆ ನಂ ಪಶ್ಚಿಮಕ್ಕೆ ಕಲ್ಲಯ್ಯರವರಿಗೆ ಸೇರಿದ ಮನೆ ಇದ್ದು, ಸದರಿ ಮನೆಯನ್ನು ಸುಮಾರು **40** ವರ್ಷಗಳ ಹಿಂದೆ ಕಟ್ಟಿರುತ್ತಾರೆಂದರೆ ಸರಿಯಲ್ಲ, ಸುಮಾರು **20** ವರ್ಷಗಳ ಹಿಂದೆ ವಾದಿಯು ಕಟ್ಟಿರುತ್ತಾರೆ. ಸದರಿ ಮನೆಯಲ್ಲಿ ಈಗ **1** ನೇ ಪ್ರತಿವಾದಿ ವಾಸ ಮಾಡುತ್ತಿರುತ್ತಾರೆಂದರೆ ಸರಿ. ಸದರಿ ಮನೆಯ ಪೂರ್ವಕ್ಕೆ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ಸದರಿ ಖಾಲಿ ಜಾಗಕ್ಕೆ **1** ನೇ ಪ್ರತಿವಾದಿ ಕಲ್ಲು ಕಾಂಪೌಂಡ್ ಹಾಕಿಕೊಂಡು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

**2.** ವಾದಿ ಮತ್ತು ಅವರ ಸಹೋದರರು ಮಾಡಿಕೊಂಡ ಪಂಚಾಯಿತಿ ಪಾರಿಕತ್ತಿನ ಪ್ರಕಾರ ಬಂದ ಹಿಸ್ಸೆಗಳಲ್ಲಿ ವಾದಿ ಮತ್ತು ಅವರ ಸಹೋದರರು ಅವರವರ ಹಿಸ್ಸೆಗಳಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ, ಸರ್ವೆ **59/1** ರ ಒಂದು ಭಾಗದಲ್ಲಿ ಕಲ್ಲಯ್ಯರವರು ಮನೆಯನ್ನು ಕಟ್ಟಿಕೊಳ್ಳಲು ವಾದಿಯು ಬಿಟ್ಟುಕೊಟ್ಟಿರುತ್ತಾರೆ. ದಾವಾ ಆಸ್ತಿಯು ಈರಮ್ಮರವರಿಗೆ ಅವರ ತಂದೆಯಿಂದ ಬಂದಿರುತ್ತದೆ. ದಾವಾ ಆಸ್ತಿಯಲ್ಲಿ ಈರಮ್ಮ ಮತ್ತು ಕಲ್ಲಯ್ಯ ಹಾಗೂ ವಾದಿಯ ನಡುವೆ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಲು ಈರಮ್ಮರವರಿಗೆ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ

ಸುಮಾರು **40** ವರ್ಷಗಳಿಂದ ಕಲ್ಲಯ್ಯನ ಕುಟುಂಬದವರು ವಾಸ ಮಾಡುತ್ತಿರುತ್ತಾರೆಂದರೆ ಸರಿಯಲ್ಲ, **20** ವರ್ಷಗಳಿಂದ ವಾಸಮಾಡುತ್ತಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

Bank manager Plaintiff by name M. Prince Amala saviour is present, filed his affidavit in lieu of chief examination and examined as PW-1 got marked Ex.P. 1 to 6.

Defendant placed exparte.

Hence cross of PW 1 taken as nil.

For argument by **04.03.2026.**

Civil Judge and JMFC.
*Koratagere.*